

ದೈತ್ಯ ಹಸ್ತಗಳು ವಜ್ರಾಕಾರದ ಬಂಡೆಗಳನ್ನು ಸಿಂಹದ ಆಕಾರದಲ್ಲಿ ಅಂಟಿಸಿ ಕೂರಿಸಿದಂತಿರುವ ಹೆಗ್ಗುಂದ ಬೆಟ್ಟ

ಚಾರಣಕ್ಕೆ ಹೊರಟೆ. ಬೆಂಗಳೂರಿನಿಂದ ಪ್ಯಾಸೆಂಜರ್ ರೈಲುಗಾಡಿ ಹಿಡಿದು, ದಾಬಸ್‌ಪೇಟೆಯ ನಿಲ್ದಾಣದಲ್ಲಿ ಇಳಿದೆ. ಇಲ್ಲಿಂದ ಪಾವಗಡಕ್ಕೆ ಹೋಗುತ್ತಿದ್ದ ಒಂದು ಬಸ್ಸು ಹತ್ತಿ, ಹೆಗ್ಗುಂದ ಕ್ರಾಸ್ ತಲುಪಿದೆ. ಬಲಗಡೆಯ ರಸ್ತೆ ಹೆಗ್ಗುಂದ ಹಳ್ಳಿಗೆ ಹೋಗುತ್ತೆ ಎಂದರು ಸ್ಥಳೀಯರು. ಹಸಿರಿನ ಹಾದಿಯಲ್ಲಿ ಒಂದಿಷ್ಟು ದೂರ ನಡೆದು ಹೊರಟಂತೆ, ಗಿಡಮರಗಳು ಸರಿದು ಹೊಲಗದ್ದೆಗಳು ಆರಂಭವಾದಾಗ, ಅದರಾಚೆಗೆ ದೂರದಲ್ಲಿ ಕಂಡಿತು ಕಲ್ಲುಬಂಡೆಗಳ ಬೆಟ್ಟ. ಈ ಕೋನದಿಂದ ನೋಡುವಾಗ, ಬೆಟ್ಟದ ಮುಂಭಾಗ ನಿಜಕ್ಕೂ ರಾಜ ಗಾಂಭೀರ್ಯದಿಂದ ತಲೆ ಎತ್ತಿ ಕುಳಿತ ಸಿಂಹದಂತಿತ್ತು, ಅದರ ನೆತ್ತಿಯ ಮೇಲಿನ ಬಿಳಿಯ ಬಣ್ಣದ ಪುಟ್ಟ ಗುಡಿ, ಕಿರೀಟದಂತಿತ್ತು.

ಈಗ ನಾನು ರಸ್ತೆ ಸರಿದು, ಕಟಾವು ಮಾಡಿ ಮುಗಿಸಿದ್ದ ಹೊಲದ ಬದುವಿನ ಮೇಲೆ ನೇರಕ್ಕೆ ಬೆಟ್ಟದೆಡೆಗೆ ನಡೆದೆ. ಒಂದು ಪಾಳುಬಿದ್ದ ಮಣ್ಣುಗೋಡೆಯ ಕಲ್ಲುಕಂಬಗಳ ಪುರಾತನ ಮಂಟಪವನ್ನು ದಾಟಿ ಬೆಟ್ಟದ ಬುಡದಿಂದ ಇಂತಿಷ್ಟೇ ದೂರದಲ್ಲಿದ್ದ ಹಳೆ ಊರು ಆಂಜನೇಯ ಸ್ವಾಮಿ ದೇವಾಲಯ ತಲುಪಿದೆ. ಅಲ್ಲಿಂದ ನೇರ ದಾರಿ ಬೆಟ್ಟಕ್ಕೆ. ಬೆಟ್ಟ ತಲುಪಿದ ನಾನು ನನ್ನ ಎಡಕ್ಕೆ ಕಂಡ ಕಮಾನಿನತ್ತ ನಡೆದೆ. ನೇರಕ್ಕೆ ಮೇಲೇರಿದ್ದ ಮೆಟ್ಟಿಲುಗಳ ಆರಂಭದಲ್ಲಿ ಹೊಸದಾಗಿ ನಿಲ್ಲಿಸಿದ ಕಮಾನು. ಬಂಡೆಗಳ ನಡುವಿನ ಪುರಾತನ ಮೆಟ್ಟಿಲುಗಳು ಮೇಲಿದ್ದವು, ಕೆಳಗಿನ ಈ ಭಾಗವನ್ನು ಒಂದಿಷ್ಟು ಗಾರೆ ಹಾಕಿ ಅಗಲವಾಗಿಸಿದ್ದರು.

ಹತ್ತಿ ಮೇಲೆ ಬಂದಂತೆ ಬಲಕ್ಕೆ ಪುಟ್ಟದಾದ ಗುಹೆಯಲ್ಲಿ ಮಲ್ಲಿಕಾರ್ಜುನ ಸ್ವಾಮಿ. ಆ ಗುಹೆಯ ಪ್ರವೇಶಕ್ಕೆ ಹೊಸದಾಗಿ ಹಾಕಿದ ಗ್ರಿಲ್ ರಕ್ಷಣೆಯನ್ನು ಒದಗಿಸಿದ್ದರೂ, ಸಹಜ ಸೌಂದರ್ಯಕ್ಕೆ ಕುಂದು ತಂದಿತ್ತು. ದಾನಿಗಳು ಪುರಾತನ ದೇವಾಲಯಗಳಿಗೆ ಗ್ರಿಲ್, ಟೈಲ್ಸ್ ಹಾಕುವ ಸಂಭ್ರಮದಲ್ಲಿ ಶಾಸನಗಳು, ವೀರಗಲ್ಲುಗಳಿಗೆ ಹಾನಿಯಾಗಿರುವುದನ್ನು, ಕೆಲವೆಡೆ ಸಂಪೂರ್ಣ ನಾಪತ್ತೆಯಾಗಿರುವುದನ್ನು ಕಂಡಿದ್ದ ನಾನು, ಇಲ್ಲೇನಾಯಿತೋ ಎಂದು ಆತಂಕಗೊಂಡೆ. ಆ ಶಾಸನ ಏನಾಯಿತೋ ಎಂದು ಗಾಬರಿಗೊಳ್ಳುವಷ್ಟರಲ್ಲಿ, ಗುಹೆಯ ಬಂಡೆಯ ಸುಣ್ಣ ಬಳಿದ ಮೇಲುಭಾಗದತ್ತ ನನ್ನ ಗಮನ ಹರಿಯಿತು. ಹತ್ತಿರಕ್ಕೆ ಹೋಗಿ ನೋಡಿದೆ, ಬಿಳಿಯ ಬಣ್ಣದ ಅಡಿಯಲ್ಲೂ ಶಾಸನ ಸ್ಪಷ್ಟವಾಗಿ ಕಂಡಿತು. ಹಳೆಯ ತಮಿಳು ಭಾಷೆಯಲ್ಲಿ ಇದ್ದ ಶಾಸನ. ಶಾಸನದ ಆರಂಭದಲ್ಲಿ ಒಂದು ಹಸುವಿನ ಕೆತ್ತನೆ ಕೂಡ ಇತ್ತು. ಎಪಿಗ್ರಾಫಿಯಾ, 'ಈ ಶಾಸನ ಸ್ವಸ್ತಿ ಶ್ರೀ ಮನು ಮಹಾ ಮಂಡಲೇಶ್ವರ ತ್ರಿಭುವನ ಮಲ್ಲ ತಲೈಕ್ಕಾಡುಕೊಂಡ ಭುಜಬಲ ವೀರಗಂಗ ಪೊಯ್ಸಳ ದೇವ ಪ್ರಿಥ್ವಿರಾಜ್ಯಂ...' ಎಂದು ಆರಂಭವಾಗುವುದನ್ನು ಹೇಳಿದೆ. ಇದರ ಮೂಲಕವೇ ಈ ಶಾಸನ ಹೊಯ್ಸಳ ರಾಜ ವಿಷ್ಣುವರ್ಧನನ ಕಾಲದ್ದು ಎಂದು ಸ್ಪಷ್ಟವಾಗುತ್ತದೆ. ವಿಷ್ಣುವರ್ಧನನಿಗೆ ತಲಕಾಡುಕೊಂಡ, ವೀರಗಂಗ ಎಂಬ ಬಿರುದುಗಳಿದ್ದವು.

ಗ್ರಿಲ್ ಮೂಲಕ ಒಳಗೆ ಇಣುಕಿದಾಗ ಕಿರಿದಾದ ಗುಹೆಯಲ್ಲಿ ಪುರಾತನ ನಂದಿ, ದೇವನ ಮುಂದೆ ಕುಳಿತಿರುವುದು ಕಂಡಿತು. ನಂದಿಯ ಬಲಕ್ಕೆ ನೇರ ನಿಂತ ಕಲ್ಲಿನ ಮೇಲೆ ಎಮ್.ಎ.ಎಸ್. ವಿವರಿಸಿದ ಕುಳಿತ ಪುರುಷ, ಮತ್ತವನ ಬಗಲಿಗೆ ಚೌರಿ ಹಿಡಿದು ನಿಂತ ಮನುಷ್ಯನೂ ಕಪ್ಪುಕಲ್ಲಿನ ಮೇಲೆ ಸ್ಪಷ್ಟವಾಗಿ ಕಂಡರು. ಆ ಕುಳಿತ ಭಂಗಿ ವಿಶೇಷವಿತ್ತು; ಕುಕ್ಕರಗಾಲಿನಲ್ಲಿ ನಮಸ್ಕರಿಸುತ್ತಾ ಕುಳಿತ ಭಂಗಿ, ಆದರೆ ಎರಡೂ ಹಿಮ್ಮಡಿಗಳು ಪರಸ್ಪರ ತಗಲುವಂತೆ ಕಾಲುಗಳು ಬಾಗಿದ್ದವು. ಇದೇ ಕಲ್ಲಿನ ಮೇಲೆ ಎಪಿಗ್ರಾಫಿಯಾ ವಿವರಿಸಿದ 1152ರ ಶಾಸನವೂ ಕಣ್ಣಿಗೆ ಬಿತ್ತು. ಈ ಶಾಸನ 'ನರಸಿಂಗ ದೇವರ್ ರಾಜ್ಯವಾಳುತ್ತಿದ್ದಾಗ' ಎಂದು ಆರಂಭವಾಗುತ್ತದೆ. ಒಂದನೇ ನರಸಿಂಹ ವಿಷ್ಣುವರ್ಧನನ ಮಗ, ಆತನ ನಂತರ ರಾಜ್ಯವಾಳಿದವನು.

ಈ ಗುಹೆಯಿಂದ ಮೇಲಕ್ಕಿದ್ದ ಮೆಟ್ಟಿಲನ್ನು ಹತ್ತಿ ಹೊರಟೆ. ಹೆಚ್ಚೇನೂ ಎತ್ತರ ಹೋಗಬೇಕಿರಲಿಲ್ಲ, ಮತ್ತೊಂದು ಗುಹಾಂತರ ದೇವಾಲಯ, ಶ್ರೀ ವೀರಭದ್ರ ಸ್ವಾಮಿ ದೇವಾಲಯ ಕಂಡಿತು. ಇಲ್ಲಿ ಗುಹೆಯೊಳಗೆ ಒಂದು ನೆಟ್ಟಕಲ್ಲಿನ ಮೇಲೆ ಎರಡು ಪುರುಷ ಆಕಾರದ ಕೆತ್ತನೆಗಳು ಕಂಡವು. ಅವರಿಬ್ಬರೂ ಯಾವುದೋ ನಿಗೂಢ ಧಾರ್ಮಿಕ ಆಚರಣೆಯಲ್ಲಿ ತೊಡಗಿರುವುದು ಕಂಡಿತು.

ನಾನೀಗ ನಿಂತ ಜಾಗ ಬೆಟ್ಟದ ಬೆನ್ನ ಮೇಲೆ ನಿಂತಂತಿತ್ತು. ಆದರೆ ರಾಮದೇವರ ಅಶ್ವ ಕಟ್ಟಿದ ತಾಣ, ಬೆಟ್ಟದ ಶಿಖರದ ಮೇಲಿದೆ. ಇಲ್ಲಿಂದ ಮುಂದಕ್ಕೆ ಮೇಲೇರಲು ಬಂಡೆಗಳ ನಡುವಲ್ಲಿ, ಪೊದೆಗಳ ಮಧ್ಯದಲ್ಲಿ ದಾರಿ ಕಾಣದೆ, ಇಳಿಯ ಹೊರಟೆ.

ಬೆಟ್ಟದಿಂದ ಇಳಿದು ಬಂದಂತೆ, ಒಂದು ಬಂಡೆಯ ಮೇಲೆ ಇತ್ತೀಚೆಗೆ ಬಿಳಿಯ ಬಣ್ಣದಲ್ಲಿ ಬಳಿದ ದಿಕ್ಕು ತೋರುವ ಬಾಣದ ಗುರುತೊಂದು ಕಾಣಿಸಿತು. 'ಶ್ರೀ ಆದಿದೇವತೆ ಕುಕ್ಕಲಮ್ಮ ದೇವಿ



ಮಲ್ಲಿಕಾರ್ಜುನ ಗುಹಾಂತರ ದೇವಾಲಯದ ಪ್ರವೇಶದಲ್ಲಿರುವ ಕ್ರಿ.ಶ. 1115ರ ಶಾಸನ



ಕೋಣನ ತಲೆಯ ಮೇಲೆ ನಿಂತ ಮಹಿಷ ಮರ್ದಿನಿ ದುರ್ಗೆಯ ಪುರಾತನ ಕೆತ್ತನೆ. ದೇವಿಯ ಕಾಲ ಬಳಿ ಕುಳಿತ ಭಕ್ತನು ತನ್ನ ಕುತ್ತಿಗೆಯನ್ನು ತಾನೇ ಕತ್ತರಿಸಿ ಅರ್ಪಿಸಲು ಹೊರಟ ಆತ್ಮಬಲಿಯ ರೌದ್ರದೃಶ್ಯ.